# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರು ಚಂದ್ರಾ ಬಡಾವಣೆ ಉಪ-ವಿಭಾಗ, ಶಕ್ತಿಸೌಧ, 2ನೇ ಮಹಡಿ 4ನೇ ಬಿ ಮುಖ್ಯರಸ್ತೆ, 13ನೇ ಅಡ್ಡರಸ್ತೆ, ಎಂ.ಸಿ. ಬಡಾವಣೆ, ಬೆಂಗಳೂರು- 560040.

ದಿನಾಂಕ : 02-07-2022

ಸಂಖ್ಯೆ :- ವಾ-127/ವಾ.ಸ/ಸಭಾನಡವಳಿ/ /2021-22

## -: ಸಭೆಯ ನಡವಳಿಗಳು :-

ದಿನಾಂಕ. 02-07-2022 ಶನಿವಾರದಂದು ಪೂರ್ವಾಹ್ನ 11-30 ಘಂಟೆಗೆ ವಾರ್ಡ್ – 127 ಮೂಡಲಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್ ಮಟ್ಟದ ಸಮಿತಿ ಸಭೆಯನ್ನು ನೋಡೆಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಶ್ರೀ ಎನ್. ಆನಂದ್, ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ನೋಡೆಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು. ವಾರ್ಡ್ – 127 ರವರು ಸಭೆಗೆ ಆಗಮಿಸಿರುವ ಎಲ್ಲರಿಗೂ ಸ್ವಾಗತ ಕೋರಿದರು. ನಜಿತರ ಸಾರ್ವಜನಿಕರ ಕುಂದುಕೊರತೆಗಳು ಹಾಗೂ ವಾರ್ಡ್ ಅಭಿವೃದ್ಧಿಗೆ ಸಂಬಂಧಿಸಿದಂತೆ ಹಾಗೂ ಕೋವಿಡ್- 19 ವೈರಸ್‌ನ ಸೋಂಕಿನ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು. ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಾಗೂ ಸಾರ್ವಜನಿಕರ ಹಿತರಕ್ಷಣೆಗಾಗಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ಸಭೆಯಲ್ಲಿ ಉಪಸ್ಥಿತರಾಗಿರುವ ಮಾನ್ಯ ನೋಡೆಲ್ ಅಧಿಕಾರಿಯವರಿಗೆ ಮತ್ತು ಸಭೆಗೆ ಆಗಮಿಸಿರುವ ಎಲ್ಲಾ ಅಧಿಕಾರಿಗಳಿಗೆ ಸಹಾಯಕ ಅಭಿಯಂತರರು ಸಭೆಗೆ ಸ್ವಾಗತ ಕೋರುತ್ತಾ, ಸಭೆಯನ್ನು ಮುನ್ನಡೆಸಲಾಯಿತು.

ಸಭೆಗೆ ಹಾಜರಿದ್ದವರು

| | |
|---|---|
| 1 | ಶ್ರೀ ಎನ್. ಆನಂದ್ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ನೋಡೆಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ –127 |
| 2 | ಶ್ರೀ ಸತೀಶ್‌ಕುಮಾರ್ .ಜಿ ಸಹಾಯಕ ಅಭಿಯಂತರರು ಕಾರ್ಯದರ್ಶಿ ಮತ್ತು ಸಂಚಾಲಕರು |
| 3 | ಶ್ರೀಮತಿ ರಮ್ಯ ಕೆ.ಎಸ್ ಹಿರಿಯ ಆರೋಗ್ಯ ಪರಿವೀಕ್ಷಕರು |
| 4 | ಶ್ರೀ ಜಯರಾಮಯ್ಯ .ಸಿ ಕೆಲಸ ಪರಿವೀಕ್ಷಕರು |
| 5 | ಶ್ರೀ ಪ್ರಾಣೇಶ್ ಜಿ.ಎಸ್ (ವಾರ್ಡ್ ಮಾರ್ಷಲ್) |
| 6 | ಶ್ರೀ ರವಿಕುಮಾರ್ .ಎನ್ (ಘನತ್ಯಾಜ್ಯ ನಿರ್ವಹಣೆ ಗುತ್ತಿಗೆದಾರರು) |

## ಸಭೆಯಲ್ಲಿ ಚರ್ಚಿಸಲಾದ ವಿಷಯಗಳು

**1) ಕೋವಿಡ್–19 ಸಾಂಕ್ರಾಮಿಕ ರೋಗದ ಬಗ್ಗೆ**

ಮಾನ್ಯ ಸಭಾಧ್ಯಕ್ಷರಾದ ನೋಡೆಲ್ ಅಧಿಕಾರಿಯವರು ಕೋವಿಡ್- 19 ಸಾಂಕ್ರಾಮಿಕ ರೋಗದ ಬಗ್ಗೆ ಮಾತನಾಡುತ್ತಾ, ಈ ಕೆಳಕಂಡಂತೆ ಸಭೆಯಲ್ಲಿ ತಿಳಿಸಿದರು.

- ಸಭೆಯಲ್ಲಿ ಕೋವಿಡ್- 19 ಸಾಂಕ್ರಮಿಕ ರೋಗದ ಬಗ್ಗೆ ಮುನ್ನೆಚ್ಚರಿಕೆ ಕ್ರಮ ವಹಿಸಲು ಸಭೆಯಲ್ಲಿ ಸೂಚಿಸಿದರು.
- ಕೋವಿಡ್- 19 ಸಂಬಂಧಿಸಿದಂತೆ, 18 ವರ್ಷ ಮೇಲ್ಪಟ್ಟವರಿಗೆ ಕೋವಿಡ್ ವ್ಯಾಸಿನೇಷನ್‌ಗಳನ್ನು ಜ್ಞಾನಸೌಧ ಕಟ್ಟಡದಲ್ಲಿ ಪ್ರತಿದಿನ ನೀಡಲಾಗುತ್ತಿದೆಯೆಂದು ಸಭೆಯಲ್ಲಿ ತಿಳಿಸದರು.

**2) ಅಭಿಯಂತರರ ವಿಭಾಗದ ಬಗ್ಗೆ**

ಮಾನ್ಯ ಸಭಾಧ್ಯಕ್ಷರಾದ ನೋಡೆಲ್ ಅಧಿಕಾರಿಯವರು ವಾರ್ಡ್ – 127 ಅಭಿಯಂತರರ ವಿಭಾಗದ ಬಗ್ಗೆ ಮಾತನಾಡುತ್ತಾ ಈ ಕೆಳಕಂಡಂತೆ ಸಭೆಯಲ್ಲಿ ತಿಳಿಸಿದರು.

- ರಸ್ತೆಗುಂಡಿಗಳನ್ನು ಮುಚ್ಚಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿರುವುದನ್ನು ಯಥಾವತ್ತಾಗಿ ಪಾಲಿಸಲಾಗಿರುತ್ತದೆ.
- ಸಹಾಯ 2.0 ಅಪ್ಲಿಕೇಷನ್‌ನಲ್ಲಿ ದಾಖಲಾಗುತ್ತಿರುವ ದೂರುಗಳಿಗೆ ಶೀಘ್ರವಾಗಿ ಸೂಕ್ತ ಕ್ರಮವಹಿಸಬೇಕಾಗಿ ಹಾಗೂ ಆಗಿಂದಾಗ್ಗೆ ದೂರುಗಳನ್ನು ಮುಕ್ತಾಯಗೊಳಿಸಲು ತಿಳಿಸಿದರು.

**3) ಘನತ್ಯಾಜ್ಯ ವಿಭಾಗದ ಬಗ್ಗೆ :-**

- ಹಸಿ ಮತ್ತು ಒಣಕಸ ನಿರ್ವಹಣೆಗೆ ಒತ್ತು ನೀಡಲು ಸಭೆಯಲ್ಲಿ ಸೂಚಿಸಲಾಯಿತು ಕಸ ತೆರವುಗೊಳಿಸುವ ಸ್ಥಳದಲ್ಲಿ ಡೆಬ್ರಿಸ್‌ನ್ನು ತೆರವುಗೊಳಿಸಲು ಸೂಚಿಸಲಾಯಿತು.
- ಕೋವಿಡ್ ಪ್ರಕರಣಕ್ಕೆ ಸಂಬಂಧಿಸಿದಂತೆ, ವಾರ್ಡ್‌ನ ರಸ್ತೆಗಳಿಗೆ ಸೋಡಿಯಂ ಹೈಪೋಕ್ಲೋರೈಡ್ ದ್ರಾವಣವನ್ನು ಸಿಂಪಡಿಸುವ ಪ್ರತಿ ತಿಂಗಳು ಸಭೆಯಲ್ಲಿ ತಿಳಿಸಿದರು.

4) ಬಿಡಬ್ಲ್ಯೂಎಸ್ಎಸ್‌ಬಿ ವಿಭಾಗದ ಬಗ್ಗೆ:-

ವಾರ್ಡ್ ವ್ಯಾಪ್ತಿಯಲ್ಲಿ ಸ್ಯಾನಿಟರಿ ಪೈಪ್‌ಲೈನ್‌ಗಳನ್ನು ದುರಸ್ಥಿಪಡಿಸಲು ಸೂಚಿಸಲಾಯಿತು. ಹಾಗೂ ಮ್ಯಾನ್‌ಹೋಲ್‌ಗಳಲ್ಲಿ ತೆಗೆದಿರುವ ಡೆಬ್ರಿಸ್‌ನ್ನು ಸ್ಥಳಾಂತರಿಸಲು ಸೂಚಿಸಲಾಯಿತು ಹಾಗೂ ಈ ಹಿಂದಿನ ಸಭೆಯಲ್ಲಿ ಸಲ್ಲಿಸಿರುವ ದೂರುಗಳನ್ನು ಶೀಘ್ರಗತಿಯಲ್ಲಿ ಬಗೆ ಹರಿಸಲು ತಿಳಿಸಲಾಯಿತು

ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದಂತೆ ದೂರುಗಳನ್ನು ಸರಿಪಡಿಸುವ ಬಗ್ಗೆ ಅಥವಾ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ವಾರ್ಡ್ ಕಮಿಟಿ ವಾರ್ಡ್ – 127 ವಾಟ್ಸ್‌ಅಪ್ ಗ್ರೂಪ್ ನಲ್ಲಿ ವರದಿ ಮಾಡಲು ಸೂಚಿಸುತ್ತಾ, ಸಭೆಯನ್ನು ಮುಕ್ತಾಯ ಗೊಳಿಸಲಾಯಿತು. ಸಭೆಯ ಕೊನೆಯಲ್ಲಿ ಸಹಾಯಕ ಅಭಿಯಂತರರು ವಾರ್ಡ್ 127 ರವರು ಸಮಿತಿ ಸಭೆಗೆ ಆಗಮಿಸಿರುವ ಎಲ್ಲರಿಗೂ ವಂದಿಸಿದರು.

ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ 127

ಅಧ್ಯಕ್ಷರು,
ಹಾಗೂ ಕಾರ್ಯಪಾಲಕ ಅಭಿಯಂತರರು
ನೋಡೆಲ್ ಅಧಿಕಾರಿಗಳು

ಪ್ರತಿಯನ್ನು:-

1) ಮಾನ್ಯ ಮಾನ್ಯ ವಲಯ ವಿಶೇಷ ಆಯುಕ್ತರು (ಪಶ್ಚಿಮ) ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಮಾನ್ಯ ಜಂಟಿ ಆಯುಕ್ತರು (ಪಶ್ಚಿಮ) ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3) ಕಾರ್ಯಪಾಲಕ ಅಭಿಯಂತರರು (ಗೋವಿಂದರಾಜನಗರ) ವಿಭಾಗರವರಿಗೆ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
4) ವೃತ್ತ ಆರಕ್ಷಕ ನಿರೀಕ್ಷಕರು (ಕಾನೂನು ಮತ್ತು ಸುವ್ಯವಸ್ಥೆ) ಪೊಲೀಸ್ ಇಲಾಖೆ, ವಿಜಯನಗರ / ಚಂದ್ರಾಲೇಔಟ್ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
5) ವೃತ್ತ ಆರಕ್ಷಕ ನಿರೀಕ್ಷಕರು (ಸಂಚಾರಿ ವಿಭಾಗ) ಪೊಲೀಸ್ ಇಲಾಖೆ, ವಿಜಯನಗರ / ಚಂದ್ರಾಲೇಔಟ್ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
6) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬೆಸ್ಕಾಂ, ಕಾಮಾಕ್ಷಿಪಾಳ್ಯ / ವಿಜಯನಗರ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
7) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬಿಡಬ್ಲ್ಯೂಎಸ್ಎಸ್‌ಬಿ ವಿಜಯನಗರ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
8) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ಕೋಶ ಗೋವಿಂದರಾಜನಗರ ವಿಭಾಗ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
9) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬೀದಿ ದೀಪ ನಿರ್ವಹಣೆ (ಬಿಬಿಎಂಪಿ ವಿದ್ಯುತ್) ವಿಭಾಗ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
10) ಸಹಾಯಕ ಕಂದಾಯ ಅಧಿಕಾರಿಗಳು (ಚಂದ್ರಾಬಡಾವಣೆ) ಉಪವಿಭಾಗ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
11) ಅಧೀಕ್ಷಕರು ತೋಟಗಾರಿಕೆ ಇಲಾಖೆ (ಪಶ್ಚಿಮ) ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
12) ಆರೋಗ್ಯ ವೈದ್ಯಾಧಿಕಾರಿಗಳು (ಗೋವಿಂದರಾಜನಗರ) ವಿಭಾಗರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
13) ವಲಯ ಅರಣ್ಯಾಧಿಕಾರಿ (ಪಶ್ಚಿಮ) ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
14) ಕಿರಿಯ / ಹಿರಿಯ ಆರೋಗ್ಯ ಪರಿವೀಕ್ಷಕರು ಸದಸ್ಯರುಗಳ ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕೆ
15) ವಾರ್ಡ್ ಪ್ರದೇಶಗಳ ಸ್ಥಳೀಯ ನಾಗರೀಕ ಕಲ್ಯಾಣ ಸಂಘಗಳು ರವರಿಗೆ ಮಾಹಿತಿಗಾಗಿ ಕಳುಹಿಸಿದೆ.